**ಸಾಕ್ಷಿಯನ್ನು ದಿಃ 09.09.2024 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಪ್ರಥಮ ವರ್ತಮಾನ ವರದಿಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 1 ಎಂದು, ದೂರಿನ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 2 ಎಂದು, ಸ್ಥಳ ಪಂಚನಾಮೆಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 3 ಎಂದು, ಕಚ್ಚಾ ನಕ್ಷೆಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 4 ಎಂದು, ಎರಡು ಅಮಾನತ್ ಪಂಚನಾಮೆಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 5 ಎಂದು, ಐಎಂವಿ ವರದಿಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 6 ಎಂದು, ಶವ ತನಿಖಾ ವರದಿಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 7 ಎಂದು, ಪಿ.ಎಂ. ವರದಿಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 8 ಎಂದು, ಅಂತಿಮ ದೋಷಾರೋಪಣಾ ಪಟ್ಟಿಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 9 ಎಂದು, ಮೃತನ ಆಧಾರ್ ಕಾರ್ಡ್ ನ ನೋಟರಿಕೃತ ದಾಖಲೆ ಹಾಜರುಪಡಿಸಿದ್ದು, ಅದನ್ನು ನಿಪಿ. 10 ಎಂದು, ಅರ್ಜಿದಾರರ ನಾಲ್ಕು ಆಧಾರ್ ಕಾರ್ಡ್ ನ ನೋಟರಿಕೃತ ದಾಖಲೆ ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ. 11 ಎಂದು ಗುರುತಿಸಲಾಯಿತು. ಆದುದರಿಂದ ನಾನು ಕೋರಿರುವಂತೆ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

(ನಿಪಿ. 10 ಮತ್ತು ನಿಪಿ. 11 ರ ಮೂಲ ದಾಖಲೆಗಳನ್ನು ಪರಿಶೀಲಿಸಿ ಸಾಕ್ಷಿಗೆ ಹಿಂದಿರುಗಿಸಲಾಯಿತು)

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ಸಮಯಾವಕಾಶವನ್ನು ಕೋರಿದ್ದು ನೀಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.